1/536735/2024

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/03/ಸಿಸಿಟಿಕ್/2023(978425)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:08-01-2024.

ಇವರಿಗೆ,
ಪ್ರಾಚಾರ್ಯರು,
ಸರ್ಕಾರಿ ಪಾಲಿಟೆಕ್ನಿಕ್,
ಹೊಳೆನರಸೀಪುರ

ಮಾನ್ಯರೇ,

ವಿಷಯ:- ಸಿಸಿಟೆಕ್ ಉಪಘಟಕದ ಮೂಲಕ ಆಯೋಜಿಸುತ್ತಿರುವ "Automation Technologies Driving Industry 4.0" ಎಂಬ ವಿಷಯದ ಅಲ್ಪಾವಧಿ ತರಬೇತಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-
1. ತಮ್ಮ ಪತ್ರ ಸಂಖ್ಯೆ : ಸಪಾಹೊ : 02 : ಸಿಬ್ಬಂದಿ : 2023-24 / 277 ದಿನಾಂಕ: 28-12-2023.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ : 10 : ಸಿಸಿಟೆಕ್ : 2017-18 : 2776 : ದಿನಾಂಕ:18-01-2019.

-----

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1) ರ ಪತ್ರದನ್ವಯ ಸಂಸ್ಥೆಯ ಸಿಸಿಟೆಕ್ ಉಪಘಟಕದ ಅಡಿಯಲ್ಲಿ ದಿನಾಂಕ:29-01-2024 ರಿಂದ ದಿ:02/02/2024 ರವರೆಗೆ "Automation Technologies Driving Industry 4.0" ಎಂಬ ವಿಷಯದ ಬಗ್ಗೆ ಒಂದು ವಾರದ ಅಲ್ಪಾವಧಿ ತರಬೇತಿಯನ್ನು ಯಾಂತ್ರಿಕ, ಇ&ಸಿ, ವಿದ್ಯುತ್, ಎಂಟಿಟಿ, ಮುಂತಾದ ವಿಭಾಗಗಳ ಉಪನ್ಯಾಸಕರಿಗೆ ಸಿ-20 ಪಠ್ಯಕ್ರಮಕ್ಕನುಗುಣವಾಗಿ ಆಯೋಜಿಸಲಾಗಿದ್ದು ತರಬೇತಿ ಕಾರ್ಯಕ್ರಮವನ್ನು ನಡೆಸಲು ಅನುಮತಿಯನ್ನು ಕೋರಿರುತ್ತೀರಿ.

ಈ ಹಿನ್ನೆಲೆಯಲ್ಲಿ ಸದರಿ ತರಬೇತಿಯಲ್ಲಿ ಭಾಗವಹಿಸುವ ಉಪನ್ಯಾಸಕರುಗಳು ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗದಂತೆ ತರಬೇತಿಯ ಅವಧಿಯ ಪಾಠ್ಯಪ್ರವಚನಗಳನ್ನು ತರಬೇತಿ ಮುಗಿದ ನಂತರ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಂಡು ಸರಿದೂಗಿಸುವ ಷರತ್ತುಗಳಿಗೊಳಪಟ್ಟು ತಮ್ಮ ತಮ್ಮ ಸಂಸ್ಥೆಗಳ ಪ್ರಾಂಶುಪಾಲರುಗಳಿಂದ ಅನುಮತಿ ಪಡೆದು ಸದರಿ ತರಬೇತಿಯಲ್ಲಿ ನೊಂದಾಯಿಸಿಕೊಳ್ಳಲು

CamScanner

ಸೂಚಿಸುವ ಮೂಲಕ ತರಬೇತಿಯನ್ನು ಆಯೋಜಿಸಲು ಹಾಗೂ ಉಲ್ಲೇಖ (2) ರ ಈ ಕಛೇರಿ ಸುತ್ತೋಲೆಯಲ್ಲಿನ ನಿಯಮ / ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿ, ತರಬೇತಿ ಕಾರ್ಯಕ್ರಮವನ್ನು ನಿಯಮಾನುಸಾರ ನಡೆಸಲು ಅನುಮತಿ ನೀಡಲಾಗಿದೆ.

ಸದರಿ ತರಬೇತಿಯಲ್ಲಿ ಭಾಗವಹಿಸಲು ನೊಂದಾಯಿಸಿಕೊಂಡಿರುವ ಉಪನ್ಯಾಸಕರ ಪಟ್ಟಿಗೆ ದಿನಾಂಕ:20-01-2024 ರೊಳಗಾಗಿ ಇಲಾಖೆಯಿಂದ ಕಡ್ಡಾಯವಾಗಿ ಅನುಮೋದನೆ ಪಡೆದು, ತದನಂತರ ತರಬೇತಿಯನ್ನು ಪ್ರಾರಂಭಿಸಲು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಸಿಡಿಸಿ).
09/01/24

ಪ್ರತಿ:-

ಸಿಸಿಟೆಕ್ – ಕಡತಕ್ಕೆ
ಇ-ಆಡಳಿತ ವಿಭಾಗಕ್ಕೆ – ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸಲು.

CS CamScanner